# ಅಕ್ಕಮಹಾದೇವಿಯ ವಚನಗಳಲ್ಲಿ ಸಾಮಾಜಿಕ ಚಿಂತನೆ

**Lohit .P**
Assistant Professor,
Department of Kannada,
Akshara Institute of Management Studies, Shivamogga.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನ ಒಂದು ಪರ್ವಕಾಲ. ಕನ್ನಡ ಸಾಹಿತ್ಯ ಸಂಸ್ಕೃತಿ ಮತ್ತು ಧಾಮರ್ಿಕ ಪ್ರವೃತ್ತಿಗಳು ಒಂದು ಮಜಲಿನಿಂದ ಮತ್ತೊಂದು ಮಜಲಿಗೆ ಪರಿವರ್ತನೆಯಾದ ಮಹತ್ವದ ಕಾಲಘಟ್ಟ. ಸಾಮಾನ್ಯ ಪ್ರಜ್ಞೆಗೆ ಎಟುಕದಿದ್ದ ಧಾಮರ್ಿಕ ಮೌಲ್ಯಗಳು ಜನಸಾಮಾನ್ಯರ ಭಾಷೆಗೆ ಇಳಿದು ಬಂದ ಪೂರ್ವಯುಗ ಜನಸಾಮಾನ್ಯರಿಗೆ ನೀಲಕ್ಷದ ಚಂಪೂ ಸಾಹಿತ್ಯಕ್ಕಿಂತ ಭಿನ್ನವಾಗಿ ರೂಪುಗೊಂಡುದು ವಚನ ಸಾಹಿತ್ಯ. ಶ್ರೀ ಸಾಮಾನ್ಯನಿಗೂ ಅರ್ಥವಾಗುವ ಭಾಷಾ ಮಾಧ್ಯಮ ಹುಟ್ಟು ಪಡೆದದು ಇಲ್ಲಿನ ವಿಶೇಷ. ವಚನಕಾರರು ಧರ್ಮಬೋಧನೆಯನ್ನು ತಮ್ಮ ಪ್ರಧಾನ ಅಂಗವನ್ನಾಗಿ ಇಟ್ಟುಕೊಂಡುದರಿಂದ, ಅವರು ಜನತೆಯ ಜತೆ ನಿಕಟವಾದ ಸಂಪರ್ಕವನ್ನಿಟ್ಟುಕೊಳ್ಳಬೇಕಾಗಿ ಬಂತು. ಸಾಮಾನ್ಯ ಜನತೆಯ ನಿತ್ಯ ಬದುಕಿನ ಆಗುಹೋಗುಗಳನ್ನು ಕಂಡು ಅವನ ಮನೋದೌರ್ಬಲ್ಯಗಳನ್ನು ಅರಿತು ಅದಕ್ಕೆ ಒಂದು ಪರಿಹಾರ ಮಾರ್ಗವನ್ನು ನೀಡುವ ಸಾಧನವಾಗಿ ವಚನ ಸಾಹಿತ್ಯ ಜನ್ಮವೆತ್ತಿದೆ. ಯಾವುದೇ ಸಮರ್ಥ ಸಾಹಿತ್ಯಕೃತಿಯಲ್ಲಿ ಸಮಕಾಲೀನ ಸಮಾಜದ ಪ್ರಭಾವ ಒಂದಲ್ಲ ಒಂದು ರೀತಿ ಗೋಚರಿಸುವುದು ಸಹಜ, ಈ ದೃಷ್ಟಿಯಿಂದಲೂ, ವಚನಗಳಲ್ಲಿ ಸಮಕಾಲೀನ ಸಮಾಜ ನಿಚ್ಚಳವಾಗಿ ಬಿಂಬಿತವಾಗಿದೆ. ವಚನಕಾರರು ತಾವು ಕಂಡ ಸಮಾಜವನ್ನು, ಸಾಮಾಜಿಕ, ಧಾಮರ್ಿಕ, ಆಥರ್ಿಕ, ಮತ್ತು ರಾಜಕೀಯವಾಗಿ, ಅಂದು ಅಸ್ತಿತ್ವದಲ್ಲಿದ್ದ, ಒಳಿತು ಕೆಡಕುಗಳನ್ನು ತಮ್ಮ ವಚನಗಳಲ್ಲಿ ಹಿಡಿದಿಟ್ಟಿದ್ದಾರೆ. ಈ ನಿಟ್ಟಿನಲ್ಲಿ ಬಸವಣ್ಣ, ಅಲ್ಲಮ, ಸಿದ್ದರಾಮ, ಜೇಡರ ದಾಶಿಮಯ್ಯ. ಇವರ ಸಾಲಿನಲ್ಲಿ ಶಿವಶರಣೆ, ಜನಪ್ರಿಯ ವಚನಕಾತರ್ಿ ಅಕ್ಕಮಹಾದೇವಿಯೂ ಸೇರುತ್ತಾಳೆ.

ಅಕ್ಕಮಹಾದೇವಿಯ ವಚನಗಳಲ್ಲಿ ಸಮಾಜವನ್ನು ಕುರಿತ ಆಲೋಚನೆಗಳನ್ನು ಸಂಸಾರದ ಸಂಬಂಧದ ಜೊತೆಯಲ್ಲಿಯೇ ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಏಕೆಂದರೆ ಅಕ್ಕನ ಎಲ್ಲ ವಚನಗಳು. ಮುಖ್ಯವಾಗಿ ಸಂಸಾರದ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡಂತವುಗಳಾಗಿವೆ. ಸಂಸಾರದ ರಚನೆಯನ್ನು ರೂಪಿಸಿರಬಹುದಾದ ಅನೇಕ ರೀತಿಯ ವ್ಯಕ್ತಿಗಳ ಸಂಬಂಧಗಳು

ಪ್ರತಿಕ್ರಿಯೆಗಳಲ್ಲಿ ಅಕ್ಕನ ವಚನಗಳ ಲಕ್ಷಣಗಳು ಸದಾ ತನ್ನತ್ತರೇ ಧ್ಯಾನಿಸುವ, ತನ್ನನ್ನು ಸಂತೈಸಿಕೊಳ್ಳುತ್ತಲೇ ಇರುವಂತೆ ತೋರುವ ಅಂತಮರ್ುಖಿಯಾದ ಮಹಾದೇವಿಯಕ್ಕನ ವಚನಗಳಲ್ಲಿ ಇತರರ ಬದುಕುಗಳ ಲೋಕದ ಆಗುಹೋಗುಗಳ ಇರುವಂತೆ ತೋರುವ ಬಹು ನಿರಳ. ಆದ್ದರಿಂದಲೇ ಏನೋ ಕೆಳವರ್ಗದಿಂದ ಬಂದ ವಚನಕಾತರ್ಿಯರು ತಮ್ಮ ಕಾಯಕಗಳಿಂದ ಹೊಸ ಸಮಾಜವನ್ನು ಕಟ್ಟಲು ಯತ್ನಿಸಿದರೆಂದೂ, ಅಕ್ಕಮಹಾದೇವಿಯಂಥವರು ಕೌಟುಂಬಿಕ ವ್ಯವಸ್ಥೆಯನ್ನು ಅತಿಕ್ರಮಿಸುವ ದಿಕ್ಕಿನಲ್ಲಿ ಚಿಂತಿಸಿದರೆಂದೂ ಒಂದು ಅಭಿಪ್ರಾಯ ಬೆಳೆದಿದೆ ಎಂಬುದು ವಚನಗಳ ಸ್ವರೂಪವನ್ನು ಗಮನಿಸುತ್ತಾ ಹೋದಂತೆ ತಿಳಿದುಬರುತ್ತದೆ.

ಸಂಸಾರದ ಅನಿತ್ಯತೆ ಹಾಗೂ ಅದು ಹುಟ್ಟಿಸುವ ಅನೇಕ ರೀತಿಯ ಕುರೂಪಗೊಂಡ ನೆಲೆಗಳನ್ನು ಅಕ್ಕಮಹಾದೇವಿಯ, ವಚನಗಳಲ್ಲಿ ಸಂಸಾರವನ್ನು ನಿರಾಕರಿಸುವ ಕೆಲವು ವಿವರಿಸುತ್ತವೆ. ಈ ರೀತಿಯ ಕುಟುಂಬದ ಹಿನ್ನಲೆಯಲ್ಲಿಯೂ, ಲೌಕಿಕ ಅಥವಾ ಸಮಾಜವೆಂಬ ಅರ್ಥದಲ್ಲಿ ಗ್ರಹಿಸಬಹುದಾಗಿದೆ. ವ್ಯಕ್ತಿಯ ಬದುಕಿನ ಚೈತನ್ಯವನ್ನು ವಿಷಯವನ್ನಾಗಿ ಮಾಡಿದ ಸಂಸಾರದ ಸ್ವರೂಪವನು ಅಕ್ಕಮಹಾದೇವಿ ಈ ವಚನಗಳಲ್ಲಿ ವಿವರಿಸುತ್ತಾಳೆ 'ಅಂದಂದಿನ ದಂದುಗಕ್ಕೆ' ಎನ್ನುವಂತೆ ಮಾಡುವ 'ಬೆಮ್ಮ ಸಂಸಾರ'ವು ಹಗೆ ಯಾಗಿ ಪರಿವರ್ತನೆಯಾದದ್ದನ್ನು ವಿವರಿಸುತ್ತದೆ ಈ ವಚನ.

"ಸಂಸಾರವೆಂಬ ಹಗೆಯಯ್ಯಾ ಎನ್ನ ತಂದೆ
ಎನ್ನ ವಂಶ ವಂಶದಪ್ಪದೆ ಅರಿಸಿಕೊಂಡು ಬರುತ್ತಿದೆಯಯ್ಯಾ
ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯಾ
ನಿನ್ನ ನಾ ಮರೆಹೊಕ್ಕೆ ಕಾಯಯ್ಯಾ
ಎನ್ನ ಭಿನ್ನಪವನ ಧರಿಸೊ ಚೆನ್ನಮಲ್ಲಿಕಾರ್ಜನಾ."

ಸಂಸಾರವು ಹಗೆಯಾದದ್ದನ್ನು ಹೇಳುತ್ತಾ ವಚನವು ಅದು ವ್ಯಕ್ತಿಯನ್ನು ಕೊಲ್ಲುವ ವಾತಾವರಣದ ಪರಿಯನ್ನು ದಶರ್ಿಸುತ್ತದೆ. ವ್ಯಕ್ತಿ ಮತ್ತು ಸಂಸಾರದ ಸಂಬಂಧದಲ್ಲಿನ ವಿಷಮತೆಯ ವಿವರವನ್ನಷ್ಟು ನೀಡದೆ ವಚನವು ವ್ಯಕ್ತಿಯ ಬದುಕಿನ ಚೈತನ್ಯವನ್ನೇ, ಕುಗ್ಗಿಸುವುದರ ಜೊತೆಗೆ, ಕೊಲ್ಲುವ ಸ್ವರೂಪವನ್ನು ಹೇಳುತ್ತಿದೆ. ಸಂಸಾರದಲ್ಲಿ ಹುಟ್ಟುವ, ಕೆಲವು ಪರಿಮಿತ ಭಾವನೆಗಳನ್ನು ವಿವರಿಸುತ್ತಾ, ಅಜ್ಞಾನ, ಇದರಿಂದ ರೂಪುಗೊಂಡ ಆಶೆ. ಆಶೆಯಿಂದ ಕೋಪ, ಇವು ಹುಟ್ಟುತ್ತವೆ ಇವುಗಳು ವ್ಯಕ್ತಿಯ ಅಧಃಪತನಕ್ಕೆ ದುಃಖಕ್ಕೆ ಮೂಲವಾಗುತ್ತವೆ ಎನ್ನುತಾಳೆ ಅಕ್ಕ. ಸಂಸಾರವು, ನಿಸ್ಸಾರವಾದದ್ದರ, ವಿಷಮವಾದದ್ದರ ಪರಿಯನ್ನು ಸೂಚಿಸುತ್ತದೆ.

ಗಂಡನ ಮನೆಯ ಪ್ರತಿಯೊಂದು ವ್ಯಕ್ತಿಯನ್ನು ಈ ವಚನದಲ್ಲಿ ಸಂಸಾರದ ಗುಣಗಳಿಗೆ ಹೋಲಿಸಲಾಗಿದೆ. ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲದ ಹಾಗೆ ಕುಟುಂಬದಲ್ಲಿನ ಎಚ್ಚರಿಕೆಯ ಬೇಹುಗಾರಿಕೆಯ ವಾಸ್ತವವನ್ನು ಮೇಲಿನ ವಚನ

ಹೇಳುತ್ತದೆ. ವ್ಯಕ್ತಿ ಮತ್ತು ತಾಕಿಕ ಲಕ್ಷಣಗಳ ನಡುವಿನ ಸಂಬಂಧವನ್ನು ಈ ಮೂಲಕ ಅಕ್ಕಮಹಾದೇವಿ ಹೇಳುತ್ತಾಳೆ. 'ಅಕ್ಕಮಹಾದೇವಿಯು ವ್ಯಂಗ್ಯದ ಸಪುಲ ಉದ್ದೇಶಕ್ಕಾಗಿ ಕುಟುಂಬದ ಈ ರಚನೆಯ ಸ್ವರೂಪವನ್ನು ಆಯ್ಕೆ ಮಾಡಿಕೊಂಡಿರುವುದು ಆಕಸ್ಮಿಕವೇನಲ್ಲ'. ರಾಮಾನುಜ ಅವರು ಗುರುತಿಸಿದಂತೆ ಸಾಮಾಜಿಕ ಕಟ್ಟುಗಳಿಂದ ಮುಕ್ತಳಾಗುವ ತೀವ್ರತೆಯ ಆಶಯವು ಅದರ ನಿಯಮಗಳನ್ನು ಮುರಿಯುವುದರಲ್ಲಿಯೇ ಇದೆ. ಆದ್ದರಿಂದಲೇ ಇಂಥ ಕುಟುಂಬದ ನಡವಳಿಕೆ, ನಿಯಮಗಳಿಗೆ ಬೆರಗು ಹುಟ್ಟಿಸುವ, 'ಹಾದರ'ವೆನ್ನುವ ಪದವನ್ನು ಅಕ್ಕಮಹಾದೇವಿಯು ಉದ್ದೇಶ ಪೂರ್ವಕವಾಗಿ ಬಳಸಿದ್ದಾಳೆ.

"ಗುರುವೆ ತೆತ್ತಿಗನಾದ!
ಲಿಂಗದ ಮದುವಳಿಗೆಯಾದ!
ನಾನು ಮದುವಳಿಗೆಯಾದೆನು!
ಈ ಭುವನ ವೆಲ್ಲವರಿಯಲು!
ಅಸಂಖ್ಯಾತರೆನಗೆ ತಂದೆ ತಾಯಿಗಳು!
ಕೊಟ್ಟರು ಕಾದೃಶ್ಯವಪ್ಪ ವರನನೋಡಿ!
ಇದು ಕಾರಣ ಚೆನ್ನಮಲ್ಲಿಕಾಜರ್ುನ ಗಂಡನಾದ ಬಳಿಕ
ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲಯ್ಯ"

ವೆಂಬ ಈ ವಚನದಲ್ಲಿ ಅನುಭಾವದ ಸಂಬಂಧವನ್ನು ವಿಭಿನ್ನ ಸ್ವರೂಪದ ಕುಟುಂಬ ನೆಲೆಯಲ್ಲಿ ವಿವಾರಿಸುತ್ತದೆ.

ಅಕ್ಕಮಹಾದೇವಿಯು ಆತಂಕಭರಿತ ಮನಸ್ಥಿತಿಯನ್ನು ಹೇಳಿಕೊಳ್ಳುವಳಾದರದೂ ಅದು, ತನ್ನ ಕೆಳದಿಗೆ, ಸಖಿಗೆ ಮಾತ್ರ, ಸಾಮಾಜಿಕ ನಿಯಮಗಳನ್ನು ಮೀರಿಯೂ ನೊಂದ ಮನಸ್ಸನ್ನು ಅರಿಯುವಂಥವಳು ಮತ್ತು ಸಹಾಯ ಮಾಡುವಂಥವಳು. 'ಕಳವಳದ ಮನವು ತಲೆಕೆಳಗಾದುದವ್ವ. ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ' ಎಂದು ಆತಂಕ ತುಂಬಿದ ಮನಸ್ಸಿಗೆ ಹೇಳುತ್ತಾಳೆ. ಹಾಗೆಯೇ ತಾಯಂದಿರ ಅಸಹಾಯಕತೆಯನ್ನು

ಬಂಜೆ ತಾಯಿಯ ಬೇನೆಮನರಿವಳೆ?

ಬಲದಾಯಿ ಮುದ್ದಬಲ್ಲಳೇ?........ ಈ ವಚನವು ತಿಳಿಸುತ್ತದೆ. ಕುಟುಂಬವೊಂದರಲ್ಲಿ ತಾಯಿಗೆ ಸಿಗುವ ಗೌರವಯುತ ಸ್ಥಾನಕ್ಕೆ ಮುಖ್ಯವಾದ ಕಾರಣವೆಂದರೆ, ಕುಟುಂಬದ ಎಲ್ಲ ರೀತಿಯ ಅಂತಸ್ತನ್ನು ಉಳಿಸಿ ಕಾಪಾಡಿಕೊಂಡು ಬರುತ್ತಾಳೆ ಎನ್ನುವುದು. ಅತ್ಯಂತ ಆಳದಲ್ಲಿ, ವೈಯಕ್ತಿಕ ವಾಂಛೆಗಳನ್ನು ಹತ್ತಿಕ್ಕಿರುವ ಇವಳು ಕುಟುಂಬವು ರೂಪಿಸುವ ಸಾಮಾಜಿಕ ನಿಯಮಗಳ ಪ್ರತಿನಿಧಿಯಾಗುತ್ತಾಳೆ. ಅಕ್ಕಮಹಾದೇವಿಯು ತಾಯಿಯು ಇಂಥ ಸ್ವರೂಪವನ್ನು ಕುರಿತಾಗಿಯೂ ಪರೋಕ್ಷವಾಗಿ ತನ್ನ ವಚನಗಳಲ್ಲಿ ಸೂಚಿಸುತ್ತಾಳೆ. ಅಂತೆಯೇ ಈ ವ್ಯಕ್ತಿಗಳ ಎಲ್ಲ ಸಂಬಂಧವೂ ಇವಳಿಗೆ ಅನಗತ್ಯವಷ್ಟೇ ಅಲ್ಲ ನಿರಾಕರಣೆ ಗುರಿಯಾಗುವಂತದ್ದೂ ಆಗಿದೆ.

ಅಕ್ಕಮಹಾದೇವಿಯು ಚನ್ನಮಲ್ಲಿಕಾಜರ್ುನನ ಸಂಬಂಧದಲ್ಲಿ, ತಾಕರ್ಿಕವಾಗಿ, ಹೇಳಲಾದ ನಿಬಂಧನೆಗಳು, ನಡವಳಿಕೆಗಳನ್ನು ತಿರಸ್ಕರಿಸಿದಳು. ತನ್ನ ಗಂಡನ ಸ್ವರೂಪ, ಅವನೊಡನೆ ತನ್ನ ಪ್ರೇಮದ ಸಂಬಂಧ, ಮದುವೆಯ ರೀತಿ, ಈ ಎಲ್ಲ ವಲಯಗಳಲ್ಲಿಯೂ ಅಕ್ಕನು ತಾಕಿಕ ಸಂಪ್ರಾದಾಯಸ್ಥ ಕಟ್ಟು ಪಾಡುಗಳನ್ನು ಮೀರುತ್ತಾಳೆ. ಇಷ್ಟದೈವದ ಜೊತೆಗೆ ಕೊಡುವ ಸಂಬಂಧವನ್ನು ಹೇಳುವ ಅಕ್ಕನ ವಚನಗಳೂ ಸಂಪ್ರದಾಯದ ಎಲ್ಲ ಮುಜುಗರಗಳನ್ನು ಮೀರಿಬಿಡುತ್ತದೆ. ಸಮಾಜವು ಕಾಮ- ಪ್ರೇಮಗಳ ಬಗ್ಗೆ ಹಾಕಿದ ಎಲ್ಲ ಮೀತಿ ಹಾಗೂ ಪ್ರತಿಬಂಧಕಗಳನ್ನು ಅಕ್ಕನ ವಚನ ತೊಡೆದು ಹಾಕುತ್ತದೆ.

" ಮಚ್ಚು, ಅಚ್ಚುಂಗವಾಗಿ ಒಪ್ಪಿದ ಪರಿಯನೋಡಾ
ಎಚ್ಚಡೆ ಗರಿದೋರದಂತಿರಬೇಕು
ಅಪ್ಪಿದಡೆ ಆಸ್ತಿಗಳು ಮಗ್ಗುನುಸಿಯಾಗಬೇಕು
ಬೆಚ್ಚಡೆ ಬೆಸುಗೆಯನರಿಯದಂತಿರಬೇಕು
ಮಚ್ಚು ಒಪ್ಪಿತ್ತು ಚನ್ನಮಲ್ಲಿಕಾರ್ಜನನ ಸ್ನೇಹತಾಯೆ."

ದೈಹಿಕ ಸಂಬಂಧದ ಗಾಢ ತನ್ಮಯತೆಯನ್ನು ವಿವರಿಸುವ ವಚನವು ಕಾಮಕ್ಕೆ ಸಂಬಂಧಿಸಿದ ಎಲ್ಲ ಸಂಕೋಚವನ್ನು ಅತ್ಯಂತ ಸಹಜವೆನ್ನುವ ರೀತಿಯಲ್ಲಿ ನಿತಾಕರಿಸುತ್ತದೆ. ಇಂಥ ವ್ಯಯಕ್ತಿಕ ಆಕಾಂಕ್ಷೆ ಅಭೀಪ್ಸೆಗಳಿಗೆ, ಸಾಮಾಜಿಕ ಚೌಕಟ್ಟುಗಳ ನಿಯಮಗಳಲ್ಲಿ ಅವಕಾಶವೇ ಇಲ್ಲ. ಹಾಗಾಗಿ ಅಕ್ಕಮಹಾದೇವಿಯ ಅಭಿವ್ಯಕ್ತಿಯು ಸಾಮಾಜಿಕ ಚೌಕಟ್ಟುಗಳ ನಿಯಮವನ್ನು ಅತ್ಯಂತ ವೈಯಕ್ತಿಕವಾದ ಈ ವಾತಾವರಣದಲಿ ಸಂಪೂರ್ಣವಾಗಿ ಮೀರುತ್ತದೆ, ಒಟ್ಟಾರೆ, ಚೆನ್ನಮಲ್ಲಿಕಾಜರ್ುನನ ಪ್ರೇಮ ಸಂಬಂಧವು ಕನಸು ಕಾಣುವ ಸ್ವರೂಪವನ್ನು ಧ್ವನಿಸುತ್ತದೆ ಪ್ರೇಮ ಹಾಗೂ ಸಂಬಂಧವು ಈ ಸಾಮಾಜಿಕ ವಾತಾವರಣದಲ್ಲಿ, ಆರೋಗ್ಯಪೂರ್ಣ ಬೆಳವಣಿಗೆಗೆ ಅವಕಾಶವನ್ನು ಮಾಡಿಕೊಡುವುದಿಲ್ಲ ವೆನ್ನುವುದು ಅಕ್ಕನ ಆಶಯವಾಗಿದೆ. ಹಾಗಾಗಿ, ಏಕೈಕನಾದಂಥ ಚೆನ್ನಮಲ್ಲಿಕಾಜರ್ುನನಲ್ಲಿಯೇ ಒಳಗಾಗಬೇಕಾದುದನ್ನು ಅನಿವಾರ್ಯವಾಗಿಸುತ್ತದೆ.

ಅಕ್ಕಮಹಾದೇವಿಯು ತನ್ನ ಪ್ರೇಮ ಸಂಬಂಧದ ಹಾರೈಕೆಯ ಅನುಭವದ ನೆಲೆಗಳಲ್ಲಿ ಮನುಷ್ಯ ಸಂಬಂಧದ ನೆಲೆಗಳು ಹೆಚ್ಚು ಜೀವ ಚೈತನ್ಯವನ್ನು ಹೊಂದಬೇಕೆಂದು ಹಂಬಲಿಸಿದ್ದುದರ ಅಭಿವ್ಯಕ್ತಿಯಾಗಿಯೇ ಅವಳ ವಚನಗಳ ಪ್ರಮುಖ ಧೋರಣೆಗಳು ಕಂಡು ಬರುತ್ತವೆ. ಅವಳು ಬಾಳಿದ ಲೌಕಿಕದಲ್ಲಾದರೋ ಇವುಗಳು ಸಾಧ್ಯವಾಗದಂಥ ಸ್ಥಿತಿಯೊಂದು ರೂಪುಗೊಂಡಿದ್ದು ಅಂಥ ಸಮಾಜದ ವಿರೋಧವು ಇಲ್ಲಿ ಅನಿವಾರ್ಯವಾಗಿದೆ. ಅಲ್ಲದೆ ತನ್ನ ಅನುಭವದ ಹಂಬಲದಲ್ಲಿ ಹೊಸ ಸಂಬಂಧಗಳ ಲೋಕವನ್ನು ಅಕ್ಕಮಹಾದೇವಿಯು ಕಾಣಲು ಪ್ರಯತ್ನ ಪಡುತ್ತಾಳೆ.

"ವೇದಶಾಸ್ತ್ರಾಗಮ ಪುರಾಣಗಳೆಲ್ಲವು

ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ
ಇವ ಕುಟ್ಟಲೇಕೆ ಕುಸುಕಲೇಕೆ?
ಅತ್ತಲಿತ್ತ ಹರಿವ ಮನವ ಶಿರವನರಿದಡೆ
ಬಚ್ಚಬರಿಯ ಬಯಲು ಚೆನ್ನಮಲ್ಲಿಕಾಜರ್ುನ "

ಇಲ್ಲಿರುವ ಕೊಟ್ಟಣದಲ್ಲಿ ಕುಟ್ಟುವ ಕ್ರಿಯೆ ಪ್ರತೀಕವಾಗಿ 'ಈ ವಚನದಲ್ಲಿ ಮೂಡಿ ಬಂದಿದೆ-ಸಮಾಜವನ್ನು ತಿದ್ದಬೇಕೆನ್ನುವ, ಅಂಧಶ್ರದ್ದೆಗಳನ್ನು ಹೋಗಲಾಡಿಸಬೇಕೆನ್ನುವ, ಅನವಶ್ಯಕ ಕಂದಾಚಾರಗಳನ್ನು ತೊಡೆದು ಹಾಕಬೇಕೆನ್ನುವ ಉದ್ದೇಶಗಳನ್ನು ನೇರವಾಗಿ ಅವಳು ಹೊಂದಿರದಿದ್ದರೂ ವಿಚಾರಕ್ಕಿಂತ ಆಚಾರಕ್ಕೆ, ನುಡಿಗಿಂತ ನಡೆಗೆ ಅವಳು ಮಹತ್ವವಿತ್ತಿದ್ದಳೆಂಬುದು ಅವಳ ವಚನಗಳಿಂದ ತಿಳಿದು ಬರುತ್ತದೆ.

ಶೀಲದ ಬಗೆಗಿನ ಶಿವಶರಣರ ಯುಗದ ನೈತಿಕ ನೆಲೆಯನ್ನು ಚಿಂತಿಸುವ ವಚನವನ್ನು ಉದಾಹರಣೆಯಾಗಿ ಇಲ್ಲಿ ನೋಡಬಹುದು.

"ಎಲ್ಲಿಹೋದರೂ ಕಲಿಗೆ ಭಯವಿಲ್ಲ
ಹಂದೆಗೆ ಸುಖವಿಲ್ಲ ಕೇಳಿರಣ್ಣಾ
ಈವಂಗದ ಗುಣವಿಲ್ಲ, ಕರುಣವುಳ್ಳವರಿಗೆ ಪಾಪವಿಲ್ಲ
ನಿಮ್ಮ ಮುಟ್ಟಿ ಪರಧನ-ಪರಸ್ತ್ರೀಯ ತೊರೆದಾತರಿಗೆ
ಮುಂದೆ ಭವವಿಲ್ಲ,"

ಚನ್ನಮಲ್ಲಿಕಾಜರ್ುನಾ, ದಾನ, ದಯೆ, ಪರಧನ, ಪರಸ್ತ್ರೀ ನಿರಾಕರಣೆಗಳೆ ಅಂದು ಶರಣರು ಸರಿರುವ ನೀತಿ ಮೆಟ್ಟಿಲುಗಳು. ಈ ಹಿನ್ನೆಲೆ ಅಕ್ಕನ ವಚನಗಳಲ್ಲಿ ಕಂಡು ಬರುತ್ತದೆ. ದಿನನಿತ್ಯದ ಬದುಕಿನಿಂತ ಆಯ್ದ ದೃಷ್ಟಾಂತಗಳ ಮೂಲಕ ಕೇಳುವಾತನ ಮನದಲ್ಲಿ ವಿಚಾರ ತಾನೇ ಎಚ್ಚರಗೊಳ್ಳುವಂತೆ ಮಾಡುವ ದಾಟಿ ಅಕ್ಕನದು. ವಿಚಾರವು ಭಾವದಲ್ಲಿ ಮಿಂದು ಆದರ್ೃವಾಗಿಯೇ ಇಲ್ಲಿ ತೆರೆದುಕೊಳ್ಳುತ್ತದೆ, ಅಕ್ಕನ ತಾತ್ವಕ ಚಿಂತನೆ, ಮುಖ್ಯವಾಗಿ, ವೀರಶೈವ ಧಾಮರ್ಿಕ ನೆಲೆಯಿಂದ ನೋಡಿದಾಗ, ಮೇಲ್ನೋಟಕ್ಕೆ ಶಿವಶರಣರ ಚಿಂತನೆಯ ಅನುಕರಣೆ ಇಲ್ಲಿ ಕಂಡು ಬಂದರೂ, ಆದರೆ ಅದರ ಅಂತರ್ ಸ್ವರೂಪದಲ್ಲಿ ತನ್ನದೇ ಆದ ಹಲವಾರು ವೈಶಿಷ್ಟಗಳನ್ನು ಸಹ ಸೂಚಿಸುತ್ತದೆ.

ಯೋಗಿಗೆ ಯೋಗಿಣಿಯಾಯಿತ್ತುಮಾಯೆ. ಸವಣಂಗೆ ಸವಣಿಯಾಯಿತ್ತು. ಮಾಯೆ, ಋತಿಗೆ ಪರಾಶಿಯಾಯಿತ್ತುಮಾಯೆ ಎಂಬ ಈ ವಚನದಲ್ಲಿಯೂ ಮೇಲಿನ ದರ್ಶನ ಮೈವೆತ್ತಿದ್ದರೂ, ಶವನೊಲಿದ ಶರನ ಸ್ಥಿತಿ ಮಾಯೆ/ಅಭಿಮಾನದಿಂದ ಮುಕ್ತವಾದದ್ದು. ಆದರೆ ಯೋಗೆ, ಸವಣ,ಯತಿ ಮುಂತಾದವು ಮೋಕ್ಷ ಸಾಧನೆಯ ರೂಢಿಗತ ನೆಲೆಗಳನ್ನು ಸೂಚಿಸುವ ಶಬ್ದಗಳಾಗಿವೆ. ಆದರೆ ಇಲ್ಲಿನ ಸ್ಥಿತಿ 'ಮಾಯೆ'ಯಿಂದ ಬಿಡುಗಡೆಯಾದದ್ದಲ್ಲ. ಇದಕ್ಕೆ ಬದಲಾಗಿ ಸಾಂಸಾರಿಕ ಬದುಕಿನಿಂದ ವರಕ್ತಿ ಪಡೆದರೂ ಆ ವೈರಾಗ್ಯದ ಆಚರಣೆಯ ಹಂತದಲ್ಲೇ ಯೋಗಿಣಿ. ಸವಣಿ, ಪರಾಕಿಗಳಾಗಿ, ಹೆಣ್ಣಿನ ಮೋಹ ಎದುರಾಗಬಹುದಾದದ್ದು.

ಆದ್ದರಿಂದ ಬಿಟ್ಟೆನೆಂದು ಘೋಷಿಸಿಕೊಂಡ ಮಾತ್ರಕ್ಕೆ ಅಥವಾ ಸನ್ಯಾಸ ವ್ರತದಿಂದ ಪ್ರವೃತ್ತಿಯನ್ನು ಹತ್ತಿಕ್ಕುವುದರಿಂದ ಈ ಮನದ ಮಾಯೆ ಬಿಡಲಾರದು. ಇಂಥ ಬೆಂಬೆಡದ ಮಾಯೆಯಿಂದ ಪಾರಾಗುವುದಕ್ಕೆ ಅಕ್ಕ ಕಂಡುಕೊಳ್ಳುವ ದಾರಿ, ಧೃತಿಗೆಡದ್ದು, ಭಕ್ತಿಯ ದಾರಿ.

ದೇಹ ಮನಸ್ಸು ಇಂದ್ರಿಯಗಳ ಸಾಹಚರ್ಯವನ್ನು ಸಾಧಿಸುತ್ತಲೇ ತನ್ನ ವ್ಯಕ್ತಿತ್ವದ ಔನ್ನತ್ಯಕ್ಕಾಗಿ ಪ್ರಯತ್ನಿಸುವ ವಿಶಿಷ್ಟ ಅನುಭಾವಿಕ ನೆಲೆಯಿಂದ ಅಕ್ಕಮಹಾದೇವಿಯು ಕಾಯ ಜೀವಿಗಳ ದ್ವಂದ್ವವನ್ನು ನೀರಲೆತ್ನಿಸುವುದು ವಚನಗಳಲ್ಲಿ, ಕಂಡುಬರುತ್ತದೆ. ತಾಕರ್ಿಕದ ವಾತಾವರನದಲ್ಲಿ ಶರೀರದ ಬಗ್ಗೆ ಅತೀವ ನಿರಾಶಕ್ತಿ, ನಿರಾಕರಣೆಯನ್ನು ವ್ಯಕ್ತಪಡಿಸುವ ಮಹಾದೇವಿಯಕ್ಕನು ಅನುಭಾವದ ಅಶಯಗಳಲ್ಲಿ ದೇಹ ಮನಸ್ಸುಗಳ ಬೆಸುಗೆಗೊಂಡಂಥ ತನ್ನ ವ್ಯಕ್ತಿತ್ವವನ್ನು ವಚನಗಳಲ್ಲಿ ಬಿಚ್ಚಿಕೊಳ್ಳಲು ಯತ್ನಿಸುತ್ತಾಳೆ.

"ಪಂಚೇಂದ್ರಿಯದ ಎರವಣಿಯ
ವಾದದ ಭರದ ಜವ್ವನದೊಡಲು ವೃಥಾಹೋಯಿತಾಲ್ಲಾ!
ತುಂಬಿ ಪರಿಮಳವ ಕೊಂಡು ಲಂಬಿಸುವ ತೆರೆನಂತೆ
ಇನ್ನೊಂದಿಗೆ ಒಳಕೊಂಬೆಯೇ, ಅಯ್ಯಾ ಚೆನ್ನಮಲ್ಲಿಕಾಜರ್ುನಾ,"

ಎನ್ನುವಲ್ಲಿ ಚೆನ್ನಮಲ್ಲಿಕಾಜರ್ುನನಲ್ಲಿ ಸೇರಿ ಹೋಗಬೇಕೆಂಬ ಆಧ್ಯಾತ್ಮಿಕ ಆಶಯಕ್ಕೂ ಭಿನ್ನತೆಯಿಲ್ಲದಂಥ ಭಾವನೆ ಬೆಸೆದಿರುವುದನ್ನು ಕಾಣಬಹುದು.

ಮಹಾದೇವಿಯಕ್ಕ ಒಬ್ಬ ಸ್ತ್ರೀಯಾಗಿ ಅದರಲ್ಲೂ ಯುವತಿಯಾಗಿ ತನ್ನ ಸಾಧನೆಯಲ್ಲಿ ತೊಡಕಾಗುವ ಸವಾಲುಗಳನ್ನು ಅತ್ಯಂತ ಸ್ಥೈರ್ಯದಿಂದ ದಿಟ್ಟತನದಿಂದ ಎದುರಿಸಿದ್ದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಆಯಾ ಸನ್ನಿವೇಶಕ್ಕೆ ತಕ್ಕಂತೆ, ನಯದಿಂದ ನಿರ್ಲಕ್ಷ್ಯ ಭಾವದಿಂದ, ನಿಭರ್ಿತಿಯಿಂದ ಅವಳು ಸ್ಪಂದಿಸಿದ್ದುದು ಅವಳ ವಚನಗಳಿಂದಲೇ ತಿಳಿದುಬರುತ್ತದೆ. ಮುಡಿಬಿಟ್ಟು, ಮೊಗಬಾಡಿ, ತನುಕರಗಿದವಳ ಎನ್ನನೇಕೆ ನುಡಿಸುವಿರ, ಎಲೆ ಅಣ್ಣಗಳಿರಾ' ಎಂದು ಬಟ್ಟೆಹ ಮೇಲೆಯ, ಭರದ ಜವ್ವನದ ಚೆಲುವ ಕಂಡು ಬಂದಿರಣ್ಣಾ.ಎಂದು ತನ್ನನ್ನು ಪೀಡಿಸಲು ಬಂದ ಅಣ್ಣಗಳಿಗೆ ಸಹಜ ವಿನಯದಿಂದಲೇ ತಾನು ಭಕ್ತೆಯಾಗಿ ಚೆನ್ನಮಲ್ಲಿಕಾಜರ್ುನನ ಕೂಡಿ ಕುಲವಳಿವಳೆಂದು ಚೆನ್ನಮಲ್ಲಿಕಾಜರ್ುನನಲ್ಲದ ಮಿಕ್ಕಿನ ಪುರುಷನು ನಮಗಾಗದ ಮೋರೆ ಎಂದು ತಿಳಿಸುವಲ್ಲಿಯೂ ಅಕ್ಕ ಹಿಂಜರಿಯುವುದಿಲ್ಲ. ಬದುಕಿನಲ್ಲಿ ಎಲ್ಲ ತರಹದ ಪ್ರತಿರೋಧಗಳೂ, ಪ್ರತಿಕ್ರಿಯೆಗಳೂ ಇರುವುದನ್ನು ಅರಿತುಕೊಂಡಿದ್ದ ಮಹಾದೇವಿ ಬದುಕಿನಲ್ಲಿರುವವರಿಗೆಲ್ಲ ಮಾರ್ಗದರ್ಶಕವಾಗುವಂತೆ ಸ್ಥಿತಪ್ರಜ್ಞತ್ವವನ್ನು ಒಂದು ವಚನದಲಿ ಪ್ರಕಟಿಸಿದ್ದೂ ಗಮನಾರ್ಹವಾಗಿದೆ. ಇಲ್ಲಿಯ ಒಂದೊಂದು ದೃಷ್ಟಾಂತವೂ ಬದುಕಿನ ನೈಜಸ್ಥಿತಿಯನ್ನು ಚಿತ್ರಿಸುವ ಪ್ರತಿಮೆಯಾಗಿರುವುದು ವಿಶೇಷ.

"ಬೆಟ್ಟದ ಮೇಲೊಂದು ಮನೆಯ ಮಾದಿ
ಮೃಗಗಳಿಗಂಜಿದಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯ?.........."

ಎನ್ನುವಲ್ಲಿ ಸಾಮಾಜಿಕ ಸ್ತುತಿ ನಿಂದೆಗಳನ್ನು ಸಮಧಾನದ ಚಿತ್ತದಿಂದ ಸ್ವೀಕರಿಸುವ ಅಥವಾ ಅವುಗಳನ್ನು ದಿವ್ಯ ನಿರ್ಲಕ್ಷ್ಯದಿಂದ ಗಮನಿಸಲು ಮಹಾದೇವಿ. ಹಸಿವು ತೃಷೆಗಳನ್ನು ಮೀರಿನಿಲ್ಲುವ. ಪ್ರಕೃತಿಯ ಪ್ರಕೋಪವನ್ನು ಎದುರಿಸುವ ಎದೆಗಾರಿಕೆಯವಳಾಗಿರುವ ಭಾವವು ಸಹ ಅವಳ ವಚನದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

"ಗುರುಕೊಟ್ಟ ಲಿಂಗದಲ್ಲಿಯೇ
ಎಲ್ಲಾ ತೀರ್ಥಂಗಳು, ಎಲ್ಲಾ ಕ್ಷೇತ್ರಂಗಳು
'ಇಹವೆಂದು' ಭಾವಿಸಿ ಮುಕ್ತರಪ್ಪುದಯ್ಯ!
ಇಂತಲ್ಲದೆ ಗುರುಕೊಟ್ಟ ಲಿಂಗವ ಕಿರಿದು ಮಾಡಿ
ತೀರ್ಥಲಿಂಗದ ಹಿರಿದು ಮಾಡಿ ಹೋದಾತಂಗೆ
ಅಘೋರ ನರಕ ತಪ್ಪುದು ಕಾಣಾ ಚೆನ್ನಮಲ್ಲಿಕಾಜರ್ುನ! "

ವಚನಕಾರರ ವಿಚಾರಶೀಲತ ಮಹಾದೇವಿಯಕ್ಕನಲ್ಲಿ ತನ್ನದೇ ಆದ ರೀತಿಯಲ್ಲಿ ಇಲ್ಲಿ ಒಡಮೂಡಿದೆ. ಇಷ್ಟೇ ಅಲ್ಲದೆ, ಇಷ್ಟಲಿಂಗದಾಚೆ ಅಂತರಂಗದಲ್ಲಿದ್ದ ಪ್ರಾಣಲಿಂಗದ, ಭಾವಲಿಂಗದ ಇರುವಿಕೆಯ ಕಡೆಗೂ ಗಮನಹರಿಸಿದ ಮಹಾದೇವಿ. ತಮ್ಮಂತ ರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನರಿಯದೆ, ಅಚ್ಚ, ಪ್ರಸಾದಿಗಳೆಂದು ಜಲಕ್ಕೆ ಕನ್ನವನಿಕ್ಕೆ ಉದಕದ ತಂದು ಲಿಂಗಕ್ಕೆ ಮಜ್ಜನಕ್ಕೆರೆವ, ಹಗಲುಗಳ್ಳರ ಮೆಚ್ಚುವನೆ ಚೆನ್ನಮಲ್ಲಿಕಾರ್ಜನ ಎಂದು ಕೇಳುವಲ್ಲಿ ಹೊರಗಣ ತೋರಿಕೆಯಾದ ಲಿಂಗವಾಗಲಿ. ಅದರ ಸ್ನಾನ ಪ್ರಜಾದಿಗಳಾಗಲಿ ಭಕ್ತಿಯ ಕುರುಹುಗಳಲ್ಲ, ಶೀಲದ ಕುರುಹುಗಳಲ್ಲ. ಅಥವಾ ಲಿಂಗವಿಲ್ಲದುದು ಭವಿತನವಲ್ಲ ಎಂಬುದು ಅಕ್ಕನ ಸ್ಪಷ್ಟ ಅಭಿಪ್ರಾಯವಾಗಿದೆ. ಅವಳ ದೃಷ್ಟಿಯಲ್ಲಿ ಕಾಮ, ಕ್ರೋಧಗಳೇ ಭವಿಗಳು, ಭವಿತನವನ್ನು ಕುರಿತ ಅಕ್ಕಮಹಾದೇವಿಯ ವ್ಯಾಖ್ಯಾನ ಅವಳ ವೈಚಾರಿಕತೆಯ ಸ್ಪಷ್ಟ ಕುರುಹಾಗಿದೆ.

ಹನ್ನೆರಡನೆ ಶತಮಾನದ ಸಮಾಜ ವ್ಯವಸ್ಥೆ ಒಪ್ಪಿಕೊಂಡು ಬಂದಿದ್ದ ಮೌಲ್ಯಗಳನ್ನು ಪ್ರಶ್ನಿಸುವುದರ ಮೂಲಕ ವಚನಕಾರರ ಹೋರಾಟ ಪ್ರಾರಂಭವಾಗುತ್ತದೆ. ಹಾಗೆಯೇ ಅವರು ತಮ್ಮ ಸಮಕಾಲೀನ ವ್ಯವಸ್ಥೆಯ ಹಿಂದೆ ಇದ್ದ ಸಂಸ್ಕೃತಿ ಸಾಹಿತ್ಯದ ಅಧ್ಯಯನ ಮಾಡಲು ತೊಡಗುತ್ತಾರೆ. ಹಾಗೂ ಬದುಕಿನ ಅನುಭವದಿಂದ, ಚಚರ್ೆಯ ಸಹಾಯದಿಂದ ಹೊಸ ವೈಚಾರಿಕ ಅಂಶಗಳು ಅವರ ವಚನಗಳಲ್ಲಿ ಪ್ರಸ್ತಾಪಿತವಾಗುತ್ತದೆ.

“ಎಲ್ಲ ಎಲ್ಲವನರಿದು ಫಲವೇನಯ್ಯ?
ತನ್ನ ತಾನರಿಯ ಬೇಕಲ್ಲದೇ?
ತನ್ನಲ್ಲಿ ಅರಿವು ಸ್ವಯವಾಗಿರಲು
ಅನ್ಯರ ಕೇಳಲುಂಟೆ? “

ತನ್ನನ್ನು ತಾನರಿಯುವುದೇ, ಮುಖ್ಯವಾಗಬೇಕು ಜೀವನದಲ್ಲಿ, ಅದಬಿಟ್ಟು ಎಲ್ಲವನರಿದು ದಕ್ಕುವ ಫಲವಾದರೂ ಏನು, ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

ನೋವಿನಿಂದ ಪರಿತಪಿಸಬೇಕಾಗಿದ್ದ ಅಕ್ಕ ಅರಿವನ್ನು ಬೆಳೆಸಿಕೊಂಡು ಅನ್ಯರ ಮಾತಿಗೆ ಬೆಲೆಕೊಡದೆ ಧೈರ್ಯವಾಗಿ ಬದುಕುತ್ತಾಳೆ. ಹಣತೆಯಂತೆ ತನ್ನನ್ನು ತಾನು ಸುಟ್ಟುಕೊಂಡು ಸಮಾಜಕ್ಕೆ ಹೊಸಬೆಳಕು ನೀಡುವ ಹಂಬಲ ಅಕ್ಕನ ವಚನದಲ್ಲಿ ಬಿಂಬಿತವಾಗುತ್ತದೆ.

“ಕಾಮನ ತಲೆಯ ಕೊರೆದು ಕಾಲನ ಕಣ್ಣಕಳೆದು
ಸೋಮ ಸೂರ್ಯರ ಹರಿದು ಹುಡಿಮಾಡಿ ತಿಂಬವಳಿಂಗೆ
ನಾಮವನಿಡಬಲ್ಲರಾರು ಹೇಳಿಕೆ! “

ಅಕ್ಕನ ವಚನಗಳಲ್ಲಿ ಬರುವ ಈ ರೀತಿಯ ಸ್ವಾಭಿಮಾನ ಕೇವಲ ಸ್ತ್ರೀಪರ ಆಶಯದ್ದಾಗಿರದೆ, ಸ್ತ್ರೀ ಪುರುಷರಿಬ್ಬರಿಗೂ ಅನ್ವಯಿಸುವ ಕಾಮನನ್ನು ಗೆಲ್ಲುವ ಕ್ರಿಯೆಯನ್ನು ಒಳಗೊಂಡಂತಹದ್ದಾಗಿದೆ. ಇಂತಹ ಸ್ವಾಭಿಮಾನದ ನುಡಿ ಒಬ್ಬ ಮಹಿಳೆಯ ಬದುಕಿನ ಅನುಭವದ ಮೂಲಕ ಬರುವುದರಿಂದ ಅದು ಇನ್ನು ಹೆಚ್ಚು ಮುಖ್ಯವೆನಿಸುತ್ತದೆ. ನಾಮದ ನಿಡಬಲ್ಲರಾರು ಹೇಳಿಕೆ? ಎಂದು ಕೇಳುವ ಪ್ರಶ್ನೆಯಲ್ಲಿ ನಿಜವಾದ ಸ್ವಾಭಿಮಾನವಡಗಿದೆ. ಅಕ್ಕ ಇಹದ ಪತಿಯನ್ನು ತೊರೆದು ಅಂತರಂಗದೊಳಗಿನ ಚೆನ್ನಮಲ್ಲಿಕಾಜರ್ುನನನ್ನು ಒಲಿದು, ಈ ಎಲ್ಲಾ ಆಸೆ ಆಮಿಷಗಳಿಗೆ ಕಾರಣವಾದ ದೇಹದ ಹಂಗುತೊರೆದು, ಕಲ್ಯಾಣದತ್ತ ಬಂದಾಗ ಜನರು ಆಡಿಕೊಂಡಿರಬೇಕು. ಹೀಗೆ ಕಿವಿಗಪ್ಪಳಿಸಿದ ಮಾತುಗಳಿಗೆ ಪ್ರತಿಕ್ರಿಯೆಯಾಗಿ ಬರುವ ಈ ವಚನದಲ್ಲಿ ಸಾತ್ವಿಕವಾದ ಸಿಟ್ಟಿದೆ. ಆದರೆ ಆ ಸಿಟ್ಟು ಸೇಡಾಗದೆ, ಸಿದ್ಧಾಂತವಾಗಿ ಅರಳುತ್ತದೆ. ಇದು ಶರಣೆಯರಲ್ಲಿರುವ ಸ್ವಾಭಿಮಾನದ ವೈಶಿಷ್ಟ್ಯತೆ. ಚೆನ್ನಮಲ್ಲಿಕಾಜರ್ುನ ತನ್ನ ಪತಿಯೆಂದು ಘೋಷಿಸಿಕೊಳ್ಳುವುದರ ಮೂಲಕವೇ ಕಾಮನತಲೆ ಕೊರೆದು, ಕಾಲನ ಕಣ್ಣುಕಳೆದು ಇಹವನ್ನು ಗೆಲ್ಲುವ ಪರಿಯ ಸ್ವಾಭಿಮಾನ ಇಲ್ಲಿ ವ್ಯಕ್ತವಾಗಿದೆ.

“ಉದಯಾಸ್ತ ಮಾನವೆಂಬೆರೆಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ, ಶಿವನ ನೆನೆಯಿರೆ ಈ ಜನ್ಮ ಬಳಿಕಿಲ್ಲ.”

ಎಂಬಲ್ಲಿ ಅಕ್ಕ ಸೃಷ್ಟಿಸಿರುವ ಉಪಯಾಸ್ತಮಾನ ವೆಂಬ ಕೊಳಗ ಒಂದು ರೂಪಕವಷ್ಟೆ ಅಲ್ಲ. ಮಾನವರ ಬದುಕನ್ನೇ ಅಳೆಯುವ ಮಾನದಂಡವಾಗಿದೆ. ಹಾಗಲು ಇರುಳು ಎಂಬ ಸಾರ್ವಕಾಲಿಕ ದರ್ಶನವನ್ನು ಸಹ ಸೂಚಿಸುತ್ತದೆ.

ಎಳೆಯಂದಿನಲ್ಲಿ ತಂದೆ ತಾಯಂದಿರ, ಯೌವನದಲ್ಲಿ ಕೈಹಿಡಿದ ಗಂಡನ ಮುಪ್ಪಿನಲ್ಲಿ ಮಕ್ಕಳ ರಕ್ಷಣೆಯಲ್ಲಿ ಇರಬೇಕಾದ ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. ಎಂಬ ಮನುಧರ್ಮ ಸೂತ್ರವು ನಿಯಂತ್ರಿಸಿದ ಸಾಂಸಾರಿಕ ಚೌಕಟ್ಟನ್ನು ದಾಟಿ ಹೆಣ್ಣಿಗೆ ಇದರಿಂದಾಚೆಯ ಬೇರೊಂದು ಅಸ್ತಿತ್ವವೂ ವ್ಯಕ್ತಿತ್ವವೂ ಉಂಟು ಎಂಬುದನ್ನು ತನ್ನ ವೈಚಾರಿಕತೆ ಹಾಗೂ ದಿಟ್ಟತನದ ನಡುವಳಿಕೆಯ ಮೂಲಕ ಸಾಧಿಸಿತೋರಿಸಿದ ಅಕ್ಕಮಹಾದೇವಿ ಹನ್ನೆರಡನೆಯ ಶತಮಾನದ ಶರಣ ಚಳುವಳಿಯ ನಡುವೆ ಒಂದು ವಿಶಿಷ್ಟವೂ, ಭಿನ್ನವೂ ಆದ ನಿಲುವಿನಿಂದ ಹೆಣ್ತನದ ಘನತೆ ಗೌರವಗಳ ಪ್ರತೀಕವಾಗಿದ್ದಾಳೆ.

## -: ಪರಾಮರ್ಶನ ಗ್ರಂಥಗಳು :-


- ಅಕ್ಕನ ವಚನಗಳು - ಸಂಪಾದಕರು - ಡಾ. ಎಲ್.ಬಸವರಾಜು.
- ಶರಣರ ಅನುಭಾವ ಸಾಹಿತ್ಯ - ಸಂಪಾದಕರು - ಡಾ. ಎಚ್.ತಿಪ್ಪೇರುದ್ರಸ್ವಾಮಿ.
- ಅಕ್ಕಮಹಾದೇವಿ - ಸಂಪಾದಕರು - ಗುರುಲಿಂಗ ಕಾಪಸೆ.
- ಕನ್ನಡ ಸಾಹಿತ್ಯ ಚರಿತ್ರೆ - ಕನ್ನಡ ಅಧ್ಯಯನ ಸಂಸ್ಥೆ.
- ಅಕ್ಕಮಹಾದೇವಿ ಮತ್ತು ಕರಿಕಾಲಮ್ಮ - ಸಂಪಾದಕರು - ಡಾ. ಎಂ.ಎಸ್.ಲಠ್ಠೆ.
- ಕನ್ನಡ ಸಾಹಿತ್ಯ ಚರಿತ್ರೆ - ಸಂಪಾದಕರು - ರಂ.ಶ್ರೀ. ಮುಗಳಿ.
- ವಚನ ಚಳವಳಿ - ಸಂಪಾದಕರು - ಡಾ. ಬಸವರಾಜ ಸರ್ಬದ.